
SERVICE ABOVE SELF



Rotary

विश्वमित्रः

ವಿಶ್ವಮಿತ್ರ

VISHWAMITHRA

Weekly House Bulletin of Rotary Club Shimoga, R.I. Dist. 3182

THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –24 ದಿನಾಂಕ : 25–12–2024

## ದಿನಾಂಕ: 25.12.2024 ರ ವಾರದ ಸಭೆಯ ವರದಿ

ಬಹುದಿನಗಳ ನಂತರ ನಮ್ಮ ರೋಟರಿ ಕ್ಲಬ್‌ನಿಂದ ಪ್ರಾಯೋಜಿಸಲ್ಪಟ್ಟ ನೂತನ ರೋಟರಾಕ್ಟ್ ಕ್ಲಬ್‌ನ ಉದಯ, ಉದ್ಘಾಟನೆ ಮತ್ತು ಪದಾಧಿಕಾರಿಗಳ ಪದವಿ ಸ್ವೀಕಾರ ಸಮಾರಂಭ. ಕಾರ್ಯದರ್ಶಿಗಳಾದ ರೊ. ಎನ್.ಜಿ. ಉಷಾ ಮತ್ತು ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪರವರ ಬಹು ಶ್ರಮದಿಂದ ಉದಯಿಸಲ್ಪಟ್ಟ ರೋಟರಾಕ್ಟ್ ಕ್ಲಬ್‌ನ ಉದ್ಘಾಟನೆ ಮತ್ತು ರೋಟರಿ ಕೌಟುಂಬಿಕ ಸ್ನೇಹ ಮಿಲನ ಕಾರ್ಯಕ್ರಮವು ದಿನಾಂಕ: 25.12.2024 ರಂದು ಏರ್ಪಾಡಾಗಿತ್ತು. ವೇದಿಕೆಯಲ್ಲಿ ಅಧ್ಯಕ್ಷರಾದ ರೊ. ಕೆ ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿ ರೊ. ಎನ್. ಜಿ. ಉಷಾ, ರೋಟರಿ ಜಿಲ್ಲಾ ಚೇರಮನ್ ಮತ್ತು ಅಂದು ನೂತನ ರೋಟರಾಕ್ಟ್‌ನ ಉದ್ಘಾಟಕರಾದ ರೋಟರಿ ಜಿಲ್ಲಾ ಚೇರ್‌ಮನ್ ರೊ.ನವೀನ್ ಅಮೀನ್‌ರವರು, ಜಿಲ್ಲಾ ರೋಟರಾಕ್ಟ್ ಪ್ರತಿನಿಧಿ ರೊ. ಚೇತನ್‌ಕುಮಾರ್, ನಮ್ಮ ರೋಟರಿ ಕ್ಲಬ್‌ನ ರೋಟರಾಕ್ಟ್ ಸಮಿತಿ ಚೇರ್ಮನ್ ರೊ. ಎಸ್. ಮಂಜುನಾಥರವರು, ಚುನಾಯಿತ ರೋಟರಾಕ್ಟ್ ಅಧ್ಯಕ್ಷ ಡಾ. ಹೆಚ್.ಆರ್. ಮನೋಜ್ ಚುನಾಯಿತ ರೋಟರಾಕ್ಟ್ ಕಾರ್ಯದರ್ಶಿ ರೊ.ಕೌಶಿಕ್‌ರವರು, ರೊ.ಎಸ್. ಆರ್.ನಾಗರಾಜ್, ರೋಟರಿ ವಲಯ 10 ರ ಸಹಾಯಕ ಗವರ್ನರ್, ರೊ.ಆದರ್ಶ್ ಜೋನಲ್ ಲೆಫ್ಟಿನೆಂಟ್ ವೇದಿಕೆ ಮೇಲೆ ಉಪಸ್ಥಿತರಿದ್ದು, ಕಾರ್ಯಕ್ರಮ ಅತ್ಯಂತ ಚೆನ್ನಾಗಿ ಮೂಡಿ ಬಂದಿತು. ವಿಶೇಷವೆಂದರೆ ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ಹಾಗ ಇಂದಿಗೂ ಕ್ರಿಯಾಶೀಲ ರೊಟೇರಿಯನ್ನರಾದ ರೊ.ಡಿ.ಎಸ್. ನಟರಾಜ್ ಮತ್ತು ಶ್ರೀಮತಿ ಪದ್ಮಾರವರು ತಮ್ಮ ವೈವಾಹಿಕ ಜೀವನದ 60 ವರ್ಷದ ಪ್ರಯುಕ್ತ ಆಗಮಿಸಿದ್ದ ಸರ್ವರಿಗೂ ಭೋಜನದ ವ್ಯವಸ್ಥೆಯನ್ನು ಮಾಡಿದ್ದರು. ರೊ.ಡಿ.ಎಸ್. ನಟರಾಜ್‌ರವರು ಬಂಧು ಮಿತ್ರರೂ ಸಹ ಭೋಜನದಲ್ಲಿ ಪಾಲ್ಗೊಂಡಿದ್ದರು.













ಆರಂಭದಲ್ಲಿ ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಮಾತನಾಡಿ ಮನುಕುಲದ ಸೇವೆಯೇ ದೇವರ ಸೇವೆ ಎಂಬ ಗುರಿಯನ್ನು ಹೊಂದಿ 1958 ರಲ್ಲಿ ಪ್ರಾರಂಭವಾದ ನಮ್ಮ ಈ ಸಂಸ್ಥೆಯು ಯುವಜನರಿಗೆ ನಾಯಕತ್ವ ನೀಡುವ ಕನಸಿನ ಯೋಜನೆ ಇಂದು ಸಾಕಾರಗೊಳ್ಳುತ್ತಿದೆ. ಅದುವೆ ಇಂದಿನ ರೋಟರಾಕ್ಟ್ ಕ್ಲಬ್‌ನ ಪ್ರಾರಂಭ ಕಾರ್ಯಕ್ರಮ ಎಂದರು. ಕು.ಪರಿಪೂರ್ಣ ಭಟ್‌ರವರಿಂದ "ಸ್ಪರ್ಶಯ ಮನ ಉಜ್ವಲ ಜ್ಯೋತಿಂ" ಎಂಬ ಹಾಡಿನೊಂದಿಗೆ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ವೀರಣ್ಣ ಎ. ಹುಗ್ಗಿಯವರು ಸರ್ವರನ್ನು ಸ್ವಾಗತಿಸಿದರು. ಕ್ಲಬ್‌ನ ರೋಟರಾಕ್ಟ್ ಚೇರ್ಮನ್‌ರಾದ ರೊ.ಎಸ್ ಮಂಜುನಾಥರವರು ಈ ರೋಟರಾಕ್ಟ್ ಆರಂಭ ಮಾಡಲು ಪಟ್ಟ ಶ್ರಮದ ಬಗ್ಗೆ ವರದಿಯನ್ನು ನೀಡಿದರು. ರೊ. ವಾಗ್ದೇವಿ ಹೆಚ್.ಎಂ.ರವರು ಉದ್ಘಾಟಕರಾದ ರೊ.ನವೀನ್ ಅಮೀನ್‌ರವರ ಪರಿಚಯ ಮಾಡಿದರು.

ರೋಟರಿ ಜಿಲ್ಲಾ ರೋಟರಾಕ್ಟ್ ಚೇರ್ಮನ್‌ರಾದ ರೊ. ನವೀನ್ ಅಮೀನ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ವೇದಿಕೆಯ ಮೇಲಿನ ಗಣ್ಯರು ಅವರನ್ನು ಸ್ಮರಿಸಿದರು. ಅಂದು ವಿದ್ಯುಕ್ತವಾಗಿ ರೋಟರಾಕ್ಟ್ ಸದಸ್ಯರುಗಳಾಗುತ್ತಿದ್ದ ಯುವಜನರನ್ನು ವೇದಿಕೆಗೆ ಆಹ್ವಾನಿಸಿದಾಗ, ರೊ.ನವೀನ್ ಅಮೀನ್‌ರವರು ಪುಷ್ಪವನ್ನು ನೀಡಿ ಬರಮಾಡಿಕೊಂಡರು. ರೋಟರಿ ಜಿಲ್ಲಾ ಪ್ರತಿನಿಧಿ ರೊ. ಚೇತನ್ ಕುಮಾರ್‌ರವರು ನೂತನ ಸದಸ್ಯರುಗಳಿಗೆ ಪ್ರತಿಜ್ಞಾವಿಧಿ ಭೋದಿಸಿದರು.

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 01-01-2025 ಬುಧವಾರ** **ಸಂಜೆ 6:45**

**Chief Guest: PDG Rtn. G.N. Prakash**

**Topic: The Four Way Test**

**ರೋಟರಿಯ ಚತುರ್ವಿಧ ಪರೀಕ್ಷೆಯ ಬಗ್ಗೆ ಜೀವನ ಸಂದೇಶದ ಉಪನ್ಯಾಸ**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ







ಶ್ರೀ ಪವನ್‌ಕುಮಾರ್‌ರವರು ನೂತನ ರೋಟರಾಕ್ಟ್ ಅಧ್ಯಕ್ಷ ಡಾ. ಹೆಚ್. ಆರ್.ಮನೋಜರವರ ಪರಿಚಯ ಮಾಡಿದರು. ನೂತನ ಕಾರ್ಯದರ್ಶಿ ಡಾ. ಕೌಶಿಕ್‌ರವರನ್ನು ಕು.ನಿಸರ್ಗರವರು ಪರಿಚಯ ಮಾಡಿದರು. ಕ್ಲಬ್‌ನ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರವರು ರೋಟರಾಕ್ಟ್ ನೂತನ ಅಧ್ಯಕ್ಷರಾದ ರೊ.ಡಾ ಮನೋಜ್‌ರವರಿಗೆ ಕಾಲರ್ ತೊಡಿಸಿದರು. ಇದೇ ಸಂದರ್ಭದಲ್ಲಿ ರೋಟರಾಕ್ಟ್ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಿಗೆ ಪ್ರಮಾಣ ವಚನ ಭೋಧಿಸಲಾಯಿತು.

ನೂತನ ರೋಟರಾಕ್ಟ್ ಕ್ಲಬ್‌ನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಡಾ. ಮನೋಜ್‌ರವರು ನನಗೆ ಈ ಸಂದರ್ಭವು ತುಂಬಾ ಸಂತೋಷವನ್ನುಂಟು ಮಾಡಿದೆ. ರೋಟರಿ ಶಿವಮೊಗ್ಗಕ್ಕೆ ನಾನು ಆಭಾರಿಯಾಗಿದ್ದೇನೆ. ಪೌಲ್ ಹ್ಯಾರೀಸ್‌ರಿಂದ ಪ್ರಾರಂಭವಾದ ಈ ಸಂಘಟನೆ ವಿಶ್ವದಾದ್ಯಂತ ಹೆಸರಾಗಿದೆ. ವಸುದ್ಯೈವ ಕುಟುಂಬಕಂ ಎಂಬಂತೆ ಈ ರೋಟರಿಯ ವಾತಾವರಣವಿದೆ. ಸಹೋದರತ್ವ ಸಹಬಾಳ್ವೆ ಇದರ ನಡುವಳಿಕೆಯಾಗಿದೆ. ಮಾತೃದೇವೋ ಭವ, ಪಿತೃದೇವೋ ಭವ ಆಚಾರ್ಯದೇವೋ ಭವ ಎನ್ನುವಂತೆ ಈ ರೋಟರಿ ಮಾರ್ಗ ದರ್ಶಕವಾಗಿದೆ. ಸಕಾರಾತ್ಮಕ ಬದಲಾವಣೆಯನ್ನು ನಾವು ಇಲ್ಲಿ ಕಲಿಯುಬಹುದಾಗಿದೆ. ಭಾವೈಕ್ಯತೆ ಮತ್ತು ಭಾವನಾತ್ಮಕತೆಯನ್ನು ಅಳವಡಿಸಿಕೊಳ್ಳಬಹುದಾಗಿದೆ. ನಮ್ಮ ಯುವಜನರಿಗೆ ಜೀವನ ನೀತಿ ನಿಯುಮಗಳು ಉದಾಹರಣೆಗೆ ತಂದೆ ತಾಯಿಗಳನ್ನು ನಾವು ಸಮರ್ಪಕವಾಗಿ ಆದರಿಸಬೇಕು ಎಂಬುದಾಗಿದೆ ಎಂದರು. ಅವರು ತಮ್ಮ ಅಧ್ಯಕ್ಷಾವಧಿಯ ಯೋಜನೆಗಳ ವಿವರಗಳನ್ನು ಹಂಚಿಕೊಂಡರು. ಅವುಗಳಲ್ಲಿ Skill Development Programme. Job Orientation programme.KPSC UPSC Coaching Service to Youths . Bringing up Entrepreneurs. Free Health Check up camp. Free Rabies Vaccination. Exposing Talents in Youths. Music and other cultural activities. ಇವೆಲ್ಲವನ್ನು ಮಾಡಲು ಯಾವುದೇ ಸಹಕಾರವಿಲ್ಲದೇ ಸಾಧ್ಯವಿಲ್ಲ ಒಂದು ನಿಶ್ಚಿತ ಗುರಿಯೊಂದಿಗೆ ನಾವು ಸಾಗಬೇಕಿದೆ ಎಂದರು. ತಮ್ಮ ಸಮಿತಿಯ ಸದಸ್ಯರುಗಳ ಹೆಸರನ್ನು ತಿಳಿಸಿದರು.

ಉದ್ಘಾಟಕರಾದ ರೊ.ನವೀನ್ ಅಮೀನ್‌ರವರು ಮಾತನಾಡಿ, ಇಂದು ನಮಗೆ ಬಹಳ ಸಂತಸ ಹಾಗೂ ಹೆದರಿಕೆ ಆಗಿದೆ. ಸಂತಸ ಏಕೆಂದರೆ ಇದು 3 ನೇ ರೋಟರಾಕ್ಟ್ ಕ್ಲಬ್‌ನ ಉದ್ಘಾಟನೆ. ಹೆದರಿಕೆ ಏಕೆಂದರೆ ಘಟಾನುಘಟಿಗಳಿರುವ 67 ವರ್ಷದ ರೋಟರಿ ಕ್ಲಬ್‌ನಲ್ಲಿ ಮಾತನಾಡುವುದಾಗಿದೆ ಎಂದರು. ನೂತನ ರೋಟರಾಕ್ಟ್ ಕ್ಲಬ್ ಪ್ರಾರಂಭವಾಗಿದೆ. ಈ ಸಾಲಿನಲ್ಲಿ ಒಂದು ರೋಟರಾಕ್ಟ್ ಕ್ಲಬ್ ಪ್ರಾರಂಭ ಮಾಡಿ ಎಂದು ಹೇಳಿದ್ದೆ. ಅದರಂತೆ ಇಂದು ಅಧ್ಯಕ್ಷರು ಮತ್ತು




ಕಾರ್ಯದರ್ಶಿಗಳು ಪ್ರಾರಂಭ ಮಾಡಿದ್ದಾರೆ. ಅವರಿಬ್ಬರಿಗೆ ವಂದನೆಗಳು ಎಂದರು. ಇದನ್ನು ಪ್ರಾರಂಭಿಸಲು ಯುವಕರನ್ನು ಸೆಳೆಯುವುದು ಕಷ್ಟ. ಅದರಲ್ಲೂ ಉತ್ತಮ ನಾಯಕತ್ವ ನೀಡುವ ಅಧ್ಯಕ್ಷರನ್ನು ಆಯ್ಕೆ ಮಾಡಬೇಕು. ನೂತನ ಅಧ್ಯಕ್ಷರು ತಮ್ಮ ಅವಧಿಯಲ್ಲಿ ಏನೇನು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ಅವರಿಗೆ ಯೋಜನೆಯನ್ನು ಹಮ್ಮಿಕೊಳ್ಳುವ ಛಾತಿ ಇದೆ. ಯುವಕರನ್ನು ಹೇಗೆ ಸಂಘಟಿಸಬೇಕು ಎನ್ನುವುದು ತಿಳಿದಿದೆ. ಅದನ್ನು ನಿರಂತರವಾಗಿ ಪೋಷಿಸಬೇಕು. ರೋಟರಾಕ್ಟ್‌ನಲ್ಲಿ ಪಳಗಿ ರೋಟರಿ ಸೇರಿದರೆ, ಉತ್ತಮ ನಾಯಕರಾಗುತ್ತಾರೆ. ಇದು ರೊ.ಎಸ್. ಮಂಜುನಾಥರವರ ಕೈಯ್ಯಲ್ಲಿದೆ. ಇವರುಗಳಿಗೆ ಕನಿಷ್ಟ ನಾಲ್ಕು ವರ್ಷಗಳ ಕಾಲ ಮಾರ್ಗದರ್ಶನ ಮಾಡಿದರೆ ಸಾಕು ಎಂದರು. ಅಂತರರಾಷ್ಟ್ರೀಯ ರೋಟರಿಗೆ 8 ಡಾಲರ್ ಕಟ್ಟಬೇಕಾಗುತ್ತದೆ. ಡಾ ಮನೋಜ್ ಮತ್ತು ಡಾ. ಕೌಶಿಕ್ ತಂಡ ವ್ಯಕ್ತಿತ್ವ ವಿಕಸನದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕ್ಲಬ್‌ನ್ನು ಮುನ್ನಡೆಸಲಿ. ನಿಮಗೂ ಕೂಡ ನಿಮ್ಮ ಸಮುದಾಯ ಸೇವೆಗಳಿಗೆ ಗ್ಲೋಬಲ್ ಗ್ರಾಂಟ್‌ಗಳಿಗೆ ಅವಕಾಶಗಳಿವೆ ಎಂದು ತಿಳಿಸುತ್ತಾ ನಿಮ್ಮ ವರ್ಷ ಯಶಸ್ವಿಯಾಗಲಿ ಎಂದು ಹಾರೈಸಿ ರೊ.ಕೆ.ಸೂರ್ಯನಾರಾಯಣ ಉಡುಪರೊಂದಿಗೆ ರೋಟರಾಕ್ಟ್ ಥೀಮ್ **"LEADING IS OUR DUTY"** ನ್ನು ಬಿಡುಗಡೆ ಮಾಡಿದರು.

ರೋಟರಿ ಜೋನ್ 10 ರ ಸಹಾಯಕ ಗವರ್ನರ್‌ರವರಾದ ರೊ. ಎಸ್. ಆರ್.ನಾಗರಾಜ್ ಮಾತನಾಡಿ, ಇಂದು ಬಹಳ ವಿಶೇಷವಾದ ದಿನ. ನೂತನ ರೋಟರಾಕ್ಟ್ ಉದ್ಘಾಟನಾ ಮತ್ತು ನೂತನ ಪದಾಧಿಕಾರಿಗಳ ಪದವೀ ಸ್ವೀಕಾರ ಸಮಾರಂಭದ ದಿನ. ನಾಯಕತ್ವವನ್ನು ಬೆಳಗುವ ಪ್ರತಿಭೆಗಳಿಗೆ ಅನುಭವ ಕೊಡುವ ವೇದಿಕೆ. ಸುತ್ತಮುತ್ತಲಿನ ಸಮುದಾಯದವರಿಗೆ ಸಹಾಯ ಮಾಡುವುದಕ್ಕೆ ಈ ರೋಟರಾಕ್ಟ್‌ನಿಂದ ಅನುಕೂಲವಾಗುತ್ತದೆ. ಸಾರ್ವಜನಿಕ ವಲಯದಲ್ಲಿ ರೋಟರಿಯ ಸೇವೆಗಳನ್ನು ವಿಶ್ವದಾದ್ಯಂತ ಹರಡಿಕೊಂಡಿರುವ ಅದರ ವಿಸ್ತಾರತೆಯನ್ನು ಅಂಕಿ ಅಂಶಗಳ ಮೂಲಕ ವಿವರಿಸಿದರು. ನಿಮ್ಮ ಸಮಯವನ್ನು ರೋಟರಾಕ್ಟ್‌ನಲ್ಲಿ ಸೇವೆ ಮಾಡುವುದರ ಮೂಲಕ ಸಾರ್ಥಕ ಗೊಳಿಸಿಕೊಳ್ಳಬಹುದು. ಪ್ರೀತಿಯಿಂದ ನಿರಪೇಕ್ಷೆಯಿಂದ ನೀವು ಮಾಡುವ ಸೇವೆ ವ್ಯರ್ಥವಾಗದು ಎಂದು ನೈಜ ಉದಾಹರಣೆ ಮೂಲಕ ವಿವರಿಸಿದರು. ನೂತನ ಅಧ್ಯಕ್ಷರಾದ ಡಾ.ಮನೋಜ್‌ರವರು ಮಾತನಾಡುತ್ತಾ ಇಂದಿನ ಯುವಜನರು ತಂದೆ ತಾಯಿಗಳಿಗೆ ನೀಡಬೇಕಾದ ಗೌರವದ ಬಗ್ಗೆ ಸೂಚಿಸಿರುವುದು ಉತ್ತಮ ಹೆಜ್ಜೆ ಎಂದರು. ಒಳ್ಳೆಯ ಮಾನವತೆಯೇ ಸಮಾಜದ ಆಸ್ತಿ ಎಂದು ತಿಳಿಸಿ, ತಮ್ಮೆಲ್ಲಾ ಕೆಲಸಗಳು ಯಶಸ್ವಿಯಾಗಲಿ ಎಂದು ಶುಭಹಾರೈಸಿದರು.

ರೋಟರಿಜಿಲ್ಲಾ 3182 ರ ರೋಟರಾಕ್ಟ್ ಪ್ರತಿನಿಧಿ ರೊ. ಚೇತನ್‌ಕುಮಾರ್‌ರವರು ಮಾತನಾಡಿ, ಕೆಲವೊಂದು ರೋಟರಾಕ್ಟ್ ಕ್ಲಬ್‌ಗಳ ಪದವಿ ಸ್ವೀಕಾರ ಸಮಾರಂಭವಾಗುತ್ತಿದೆ. ನಾನು 3180 ರ ರೋಟರಿಯಿದ್ದಾಗಲೂ ರೋಟರಾಕ್ಟರ್ ಆಗಿದ್ದೇನೆ. 25 ಕ್ಲಬ್‌ಗಳ ಪದವೀ ಸ್ವೀಕಾರ ಸಮಾರಂಭವಾಗುತ್ತಿದೆ. ರೋಟರಾಕ್ಟ್ ಥೀಮ್ ಬಂದಿದ್ದು ಅದು **"Connect with us"** ಎಂಬುದಾಗಿ ಇದ್ದು ಥೀಮ್‌ನಲ್ಲಿರುವ 4 ವ್ಯಕ್ತಿಗಳ ಚಿತ್ರ ನಾಲ್ಕು ರೋಟರಿ ಜಿಲ್ಲೆಯದಾಗಿರುತ್ತದೆ ಎಂದರು. ಇಲ್ಲಿ ರೋಟರಿಯ ತರಹವೇ ಎಲ್ಲವೂ ಇರುತ್ತದೆ. ಜಿಲ್ಲಾ ಸಮ್ಮೇಳನವೂ ಇರುತ್ತದೆ. ಈ ವರ್ಷ "ಅನುಬಂಧ" ಎಂಬ ಹೆಸರಿನೊಂದಿಗೆ

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**







ರೋಟರಾಕ್ಟ್ ಸಮ್ಮೇಳನವಾಗುತ್ತದೆ ದಯಮಾಡಿ ಭಾಗವಹಿಸಿ ಎಂದರು. ಕೊನೆಯದಾಗಿ ನೀವು ನಮಗೆ ಸಹಕಾರ ಕೊಡಿ ಎಂದು ರೋಟರಾಕ್ಟ್‌ರ ಸದಸ್ಯರಿಗೆ ಮನವಿ ಮಾಡಿದರು.

ಜೋನಲ್ ಲೆಫ್ಟಿನೆಂಟ್ ರೊ. ಆದರ್ಶರವರು ಮಾತನಾಡಿ, ಇಂದು ನಮಗೆ ಬಹಳ ಸಂತಸವಾಗಿದೆ. ಅಲ್ಲದೇ ನೂತನ ರೋಟರಾಕ್ಟ್ ಅಧ್ಯಕ್ಷರು ಯುಪಿಎಸ್‌ಸಿ, ಕೆಪಿಎಸ್‌ಸಿ ತರಬೇತಿ ಕೊಡಲು ಯೋಜನೆ ಮಾಡಿರುವುದು ಉತ್ತಮ ಕೆಲಸವಾಗಿದೆ. ಅದನ್ನು ಆದಷ್ಟು ಶೀಘ್ರ ಅನುಷ್ಠಾನಕ್ಕೆ ತರುವುದು ಒಳ್ಳೆಯದು ಎಂದರು. ಇದು ಈ ರೋಟರಾಕ್ಟ್‌ಗೆ ಒಳ್ಳೆಯ ಹೆಸರನ್ನು ತರುತ್ತದೆ ಎಂದರು.

ರೋಟರಿ ಕ್ಲಬ್ ಶಿವಮೊಗ್ಗದ ಅಧ್ಯಕ್ಷರಾದ ರೊ. ಕೆ.ಸೂರ್ಯ ನಾರಾಯಣ ಉಡುಪರವರು ಮಾತನಾಡಿ, ಬಹು ವರ್ಷದ ಆಸೆ ಇಂದು ರೋಟರಾಕ್ಟ್ ಪ್ರಾರಂಭದ ಮೂಲಕ ಈಡೇರಿದೆ ಎಂದರು. ರೊ. ನವೀನ್ ಅಮೀನ್‌ರವರಿಗೆ, ರೊ. ಚೇತನ್ ಕುಮಾರ್, ರೊ.ಎಸ್. ಆರ್. ನಾಗರಾಜ್‌ರವರಿಗೆ, ಜೋನಲ್ ಲೆಫ್ಟಿನೆಂಟ್ ರೊ. ಆದರ್ಶ್‌ರವರಿಗೆ ವೇದಿಕೆಯಲ್ಲಿ ಅಧ್ಯಕ್ಷರು ಮತ್ತು ಸದಸ್ಯರು ರೊ.ಭಾರ್ಗವಿ ಭಟ್, ರೊ.ರಮಾಗೋಪಾಲ್ ಕು.ಪರಿಪೂರ್ಣ ಭಟ್ ಮತ್ತಿತರ ಸಹಕಾರದೊಂದಿಗೆ ಗೌರವಾರ್ಪಣೆ ಮಾಡಲಾಯಿತು. ನೂತನ ರೋಟರಾಕ್ಟ್ ಅಧ್ಯಕ್ಷ ಡಾ.ಮನೋಜ್ ಕಾರ್ಯದರ್ಶಿ ಡಾ.ಕೌಶಿಕ್‌ರವರಿಗೆ ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಡಿ.ಎಸ್. ನಟರಾಜ್‌ರವರು ಸನ್ಮಾನಿಸಿದರು.

ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಕಾರ್ಯಕ್ರಮವನ್ನು ಬಹು ಚೆನ್ನಾಗಿ ನಿರೂಪಿಸಿ ಅಚ್ಚುಕಟ್ಟಾಗಿ ನಡೆಸಿ ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

ಕೌಟುಂಬಿಕ ಸ್ನೇಹ ಮಿಲನ ಕಾರ್ಯಕ್ರಮದಲ್ಲಿ ತಮ್ಮ 60 ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಆಚರಣೆಯ ನಿಮಿತ್ತ ತಮ್ಮ ಬಂಧು ಭಾಂದವರನ್ನೆಲ್ಲಾ ಆಹ್ವಾನಿಸಿದ್ದ ರೊ.ಡಿ.ಎಸ್. ನಟರಾಜ್ ಮತ್ತು ಶ್ರೀಮತಿ ಪದ್ಮ ನಟರಾಜ್, ವಿಶೇಷವಾಗಿ ರೊ.ಎ. ಮಂಜುನಾಥರವರು ತಯಾರಿಸಿ ತಂದಿದ್ದ ಕೇಕ್‌ನ್ನು ಕತ್ತರಿಸಿ ಸಂಭ್ರವನ್ನಾಚರಿಸಿಕೊಂಡರು.







ರೊ. ರಾಕೇಶ್ ಗೌಡ ಮತ್ತು ಶ್ರೀಮತಿ ಶೃತಿ, ರೊ. ದೀಪಕ್ ಕುಮಾರ್ ಮತ್ತು ಶ್ರೀಮತಿ ವಿದ್ಯಾರಾಣಿ, ರೊ. ಸಿ.ಬಿ. ವೀರಣ್ಣ, ರೊ.ಡಿ.ಪಿ.ಮೋಹನ್ ಮತ್ತು ಶ್ರೀಮತಿ ಸುನೀತಾ ಮೋಹನ್‌ರವರು ವೇದಿಕೆಗೆ ಆಗಮಿಸಿ, ಪರಸ್ಪರ ಹಾರ ವಿನಿಮಯ ಮಾಡಿಕೊಳ್ಳುವುದರ ಮೂಲಕ ವಾರ್ಷಿಕೋತ್ಸವವನ್ನು ಆಚರಿಸಿಕೊಂಡರು. ಇದೇ ಸಂದರ್ಭದಲ್ಲಿ ರೊ.ಎ.ಮಂಜುನಾಥರವರು ನಗರದ ಕಂಟ್ರಿಕ್ಲಬ್‌ಗೆ ಉಪಾಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ಅವರನ್ನು ವೇದಿಕೆಗೆ ಆಹ್ವಾನಿಸಿ ಅಭಿನಂದಿಸಲಾಯಿತು.

ಕೊನೆಯಲ್ಲಿ ರೊ.ಎನ್.ಜಿ. ಉಷಾರವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದ ನಂತರ ರೊ.ಡಿ.ಎಸ್. ನಟರಾಜ್‌ರವರು ಏರ್ಪಡಿಸಿದ್ದ ವಿಶೇಷ ಭೋಜನವನ್ನು ಎಲ್ಲರೂ ಸವಿದರು.

## Wedding Anniversary

| | |
|---|---|
| *Dr. Shivakumar M.C. & Shruthi* | *1st Dec.* |
| *Rakesh Gowda &Shruthi* | *2nd Dec.* |
| *Dr. Kanchan Kulkarni & Dr. Vadiraj Kulkarni* | *3rd Dec.* |
| *B.N.Sathyanarayana & Sumithra* | *4th Dec.* |
| *Dr. Raksha Rao & Dr. UdayR.Rao* | *9th Dec.* |
| *M.P. Pawan & Anjali* | *11th Dec.* |
| *Aravind D.C. &Anupama* | *12th Dec.* |
| *R. Anand&Laxmi* | *14th Dec.* |
| *D.P. Mohan & Suneetha* | *15th Dec.* |
| *C.B.Veeranna & Chaya* | *16th Dec.* |
| *Dr. Mythili & Dr. Roshan* | *18th Dec.* |
| *Deepak Kori &Vidyarani* | *19th Dec.* |
| *D.S.Nataraj & Padma* | *21st Dec.* |
| *Dr. Puneeth Isloor & Dr. Ramya Nayak* | *27th Dec.* |

## Happy Birthday Wishes


*Shashidhar N.G.*
*30th Dec*


*Laxmidevi Gopinath*
*31st Dec*


*Somashekarappa Marigullappa*
*1st Jan.*


*Vishwas Yelburgi*
*04. Jan*



## ಸಂಪಾದಕೀಯ

### ಯಾರು ದೇವರು – ಒಂದು ಕಥೆ

ಒಳ್ಳೆ ಪುಣ್ಯಾತ್ಮರ ಮನೆ ಅದು. ಸದ್ಭಾವನೆ, ಸದಾಚಾರ, ಸತ್ಕಾರ್ಯಗಳನ್ನು ನಡೆಸುತ್ತಾ ಬಾಳಿ ಬದುಕಿದ ಮನೆ. ದಾನ ಕೊಡುವುದು ಎಂದರೆ ಅದರಲ್ಲೊಂದು ಅಹಂಭಾವವಿರುತ್ತದೆ. ದಾಸೋಹ ಎಂದರೆ ಅದು ವಿನಯ. ಅದು ಆ ಮನೆಯವರಿಗೆ ಗೊತ್ತಿತ್ತು. ಆದ್ದರಿಂದ ಆ ಮನೆಗೆ ದೇಹಿ ಎಂದು ಬಂದವರನ್ನು ಗೌರವದಿಂದ ಸತ್ಕರಿಸಿ ಜೋಳಿಗೆ ತುಂಬಿ ಕಳುಹಿಸುತ್ತಿದ್ದರು. ದಾನ ಪ್ರತಿಷ್ಠೆಯಿಂದಲ್ಲ. ದಾಸೋಹ ಭಾವದಿಂದ.

ಹೀಗಿರುತ್ತಿರಲಾಗಿ ಅದೊಂದು ದಿನ ಅವರ ಮನೆಗೊಬ್ಬ ಭಿಕ್ಷುಕ ಬಂದ. ಈ ಮನೆಯ ಮುಂದೆ ನಿಂತು 'ಅಮ್ಮಾ ತಾಯಿ ಭಿಕ್ಷೆ ' ಅಂತ ಕೂಗಿದ. ಕೂಡಲೇ ಆ ಮನೆಯ ಗೃಹಸ್ಥ ಗೃಹಿಣಿಯರಿಬ್ಬರೂ ಹೊರಬಂದು ಆ ಭಿಕ್ಷುಕನನ್ನು ಕಾರುಣ್ಯದಿಂದ ಕೈಹಿಡಿದು ಮನೆಯೊಳಗೆ ಕರೆದೊಯ್ದರು. ಕೈಕಾಲು ತೊಳೆಯಲು ನೀರು ಕೊಟ್ಟು ಮಣೆ ಹಾಕಿ ಕುಳ್ಳಿರಿಸಿದರು. ಹಸಿರು ಬಾಳೆಲೆಯ ಮೇಲೆ ಬಗೆ ಬಗೆ ಭಕ್ಷ್ಯಾನ್ನಗಳನ್ನು ಬಡಿಸಿದರು. ಭಿಕ್ಷುಕನಿಗೆ ಹೊಟ್ಟೆ ಬಿರಿಯುವಷ್ಟು ಊಟ ಮಾಡಿಸಿದರು.

ಅವನಿಗೆಷ್ಟು ಸಂತೋಷವಾಯಿತೋ ಅದರ ಇಮ್ಮಡಿ ಸಂತೋಷವಾಯಿತು ಆ ಮನೆಯ ಗೃಹಸ್ಥ, ಗೃಹಣಿಯರಿಗೆ. ಭೋಜನವಾದ ನಂತರ ಭಿಕ್ಷುಕನ ಜೋಳಿಗೆಗೂ ತುಂಬಿ ಗೌರವದಿಂದ ಬೀಳ್ಕೊಟ್ಟರು.

ಮನೆಯಿಂದ ಹೊರಬಂದ ಮೇಲೆ ಆ ಭಿಕ್ಷುಕ ಅಂದುಕೊಂಡ 'ಎಲಾ, ಈ ಮನೆಯವರು ಈ ಪರಿ ನನ್ನನ್ನು ಉಪಚರಿಸಿ ಗೌರವಿಸಿ ಕಳುಹಿಸಿಕೊಟ್ಟರಲ್ಲಾ ! ಹೌದು, ನಾನು ದೇವರೇ ಇರಬೇಕು. ಅಷ್ಟಲ್ಲವಾದರೆ ಇಷ್ಟನ್ನೆಲ್ಲಾ ಸುಮ್ಮನೆ ಮಾಡುತ್ತಾರಾ'?

ಇದಾದ ಮೇಲೆ ಅದೇ ಮನೆಗೆ ಮತ್ತೊಬ್ಬ ಭಿಕ್ಷುಕ ಬಂದ, 'ಅಮ್ಮಾ ಭಿಕ್ಷೆ ' ಅಂದ. ಆ ಗೃಹಸ್ಥ ಗೃಹಿಣಿಯರು ಯಥಾ ಪ್ರಕಾರ ಮನೆಯಿಂದ ಹೊರಗೆ ಬಂದು ಕೈ ಹಿಡಿದು ಕರೆದೊಯ್ದು ಬಗೆಬಗೆ ಭಕ್ಷ್ಯಾನ್ನಗಳನ್ನು ಬಡಿಸಿ ಉಪಚರಿಸಿ, ಜೊತೆಗೆ ಅವನ ಜೋಳಿಗೆಯನ್ನೂ ತುಂಬಿಸಿ ಗೌರವ, ಮರ್ಯಾದೆಗಳಿಂದ ಕಳುಹಿಸಿಕೊಟ್ಟರು.

ಆ ಭಿಕ್ಷುಕ ಹೊರಗೆ ಬಂದ ಮೇಲೆ ತನ್ನಲ್ಲಿಯೇ ಅಂದುಕೊಂಡ. ಆಹಾ, ನನ್ನಂಥ ಯಃಕಶ್ಚಿತ್ ಭಿಕ್ಷುಕನನ್ನು ಈ ಪರಿ ಗೌರವ ಮರ್ಯಾದೆಗಳಿಂದ ಸತ್ಕರಿಸಿ ಕಳುಹಿಸಿದರಲ್ಲಾ, ಇವರು ದೇವರೇ ಇರಬೇಕು. ಅಷ್ಟಲ್ಲವಾದರೆ ಇಷ್ಟೆಲ್ಲಾ ಮಾಡುತ್ತಿದ್ದರಾ?

ಕತೆಯ ಒಳಧ್ವನಿ ನಿಮಗೆ ಕೇಳಿಸಿದೆ ಅಂದುಕೊಳ್ಳುತ್ತೇನೆ. ಇದಕ್ಕೆ ದೀರ್ಘ ವ್ಯಾಖ್ಯಾನವೇನೂ ಬೇಕಿಲ್ಲ. ಜಗತ್ತಿನಲ್ಲಿ ನಾವು ಯಾರಿಂದಲೋ, ಎಲ್ಲಿಯೋ, ಏನೆಲ್ಲಾ ಪಡೆಯುತ್ತೇವೆ. ಅದಕ್ಕೆಲ್ಲಾ ನಾವು ಬಾಧ್ಯರು, ಅರ್ಹರು, ಅಂದುಕೊಳ್ಳುವುದು ಅಹಂಕಾರ. ಅದು ಕೊಟ್ಟವರ ಔದಾರ್ಯ, ಪ್ರೀತಿ ಅಂದುಕೊಳ್ಳುವುದು ವಿನಯ.

ಆ ಎರಡನೆಯ ಭಿಕ್ಷುಕ ಅಂದುಕೊಂಡದ್ದು ಸರಿ ಅನ್ನಿಸಬೇಕು ನಮಗೆ.

• ರೊ. ಎಂ. ಮಾಧವಾಚಾರ್

### ಚಿಂತನ

ಮನಸ್ಸು ನಿರ್ಮಲವಾಗಿದ್ದರೆ – ಅದೇ ಸಾಕ್ಷಾತ್ಕಾರ
ಮಾತು ಮೃದುವಾಗಿದ್ದರೆ – ಅದೇ ಚಮತ್ಕಾರ
ನಡತೆ ಶುದ್ಧವಾಗಿದ್ದರೆ – ಅದೇ ಪುರಸ್ಕಾರ
ಬದುಕು ಸರಳವಾಗಿದ್ದರೆ – ಅವರಿಗೊಂದು ನಮಸ್ಕಾರ

– ರೊ. ಕೆ. ಸೂರ್ಯನಾರಾಯಣ ಉಡುಪ






ದಿನಾಂಕ: 20–12–2024ರಂದು 'ನಮ್ಮ ನಡಿಗೆ ಹಳ್ಳಿಯ ಕಡೆಗೆ' ಎಂಬ ಕಾರ್ಯಕ್ರಮದಡಿಯಲ್ಲಿ ಕುಂಸಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಆಸ್ಪತ್ರೆ ರಹಿತ ಜೀವನ – ಆರೋಗ್ಯದ ಅರಿವು ಕಾರ್ಯಕ್ರಮ ಏರ್ಪಡಿಸಲಾಗಿತ್ತು. ರೊಟೇರಿಯನ್ ಡಾ. ಕಾಂಚನ್ ಕುಲಕರ್ಣಿಯವರು ಉಪನ್ಯಾಸ ನೀಡಿದರು.

## ROTARACT CLUB SHIMOGA 2024-25

### SPONSORED BY ROTARY CLUB, SHIMOGA

### List of Board of Directors

| | |
|---|---|
| President | – Dr. Manoj H.R |
| Vice President | - Vijay Kumar S |
| Secretary | - Dr. Koushik R |
| Joint Secretary | - Nisarga |
| Treasurer | - Pavan V. Raikar |
| Sargeant at arms | - Vinay Raj B |

**Directors**

| | |
|---|---|
| Club Service | - Abhishek |
| Community Service | - Marappa B |
| Vocational Service | - Yamuna |
| International Service | - Amulya R Pawar |

**Chairpersons**

| | |
|---|---|
| Membership | - Bharath |
| The Rotary Foundation | - Punith Kumar V |
| Service Projects | - Ramya |
| Public Image | - Poorvik K.P. |

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495